


### ಉಪಯುಕ್ತ ಮಾಹಿತಿ

ಅರ್ಷದ್ ಹುಸೈನ್, ಕೊಪ್ಪ ಅವರ 'ಮಗುವಿಗೊಂದು ಲ್ಯಾಪ್‌ಟಾಪ್' ಲೇಖನ ಉಪಯುಕ್ತವಾಗಿದೆ.

-ಜಿ.ಕೆ.ಶ್ರೀಮತಿ, ಕೋಟೇಶ್ವರ ಸೂರ್ಯ ನಾರಾಯಣ ರಾವ್- ಬೆಂಗಳೂರು, ಮಹಾವೀರ ಕಾಸರ- ಶಿವಮೊಗ್ಗ

### 'ಕೊಡೈ' ಎಂದರೆ 'ಕೊಡೈಕೆನಾಲೇ?'

ನವೀನ್ ಸೌಮ್ಯರ 'ಕೊಡೈ' ಚಿತ್ರ ಲೇಖನ ಮೆಚ್ಚುಗೆಯಾಯ್ತು. ಆದರೆ ಬೆಂಗಳೂರಿನಿಂದ ಅಲ್ಲಿಗೆ ಒಂದು ಅಂದಾಜು ದೂರವನ್ನಾದರೂ ತಿಳಿಸಬಹುದಿತ್ತು. ಈ 'ಕೊಡೈ' ಎಂದರೆ 'ಕೊಡೈಕೆನಾಲ್' ಎಂಬುದು ಬಹುಶಃ ನನಗೊಬ್ಬನಿಗೇ ಅಲ್ಲದೆ, ಇತರೆ ಓದುಗರಿಗೂ ತಿಳಿಯಲು ಸಾಕಷ್ಟು ಸಮಯವೇ ಹಿಡಿಸಿರಬೇಕು!

-ಪಿ.ಎನ್. ಶ್ರೀವತ್ಸ, ಬೆಂಗಳೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ತುಂಗೆಯ ತಟದಲ್ಲಿ...

ಕುವೆಂಪು ತಮ್ಮ ಕೃತಿಗಳಲ್ಲಿ ತುಂಗಾ ನದಿಯನ್ನು 'ತಾಯಿ ತುಂಗೆ' ಎಂದು ಕರೆದಿದ್ದಾರೆ. ಅಂಥ 'ತುಂಗೆಯ ತಟದಲ್ಲಿ' ಪಾರ್ವತಿ ಪಿಟಗಿ ಅವರ ಲೇಖನ ಚೆನ್ನಾಗಿದೆ.

-ಎಸ್. ಚನ್ನಪ್ಪ, ಮೈಸೂರು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಬಿ.ಎಸ್.ಮರಾಠೆ, ಬೆಳಗಾವಿ/ ಆರ್.ಮಂಜುನಾಥ, ಶಿವಮೊಗ್ಗ

### ವಿಚಾರವಂತ ಮುತ್ತು

ಮಾತೇ ಮುತ್ತು ಅಂಕಣದಲ್ಲಿ ಮೂಡಿಬರುವ ನುಡಿ ಮುತ್ತುಗಳು ಸುಂದರ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿವೆ. ಪ್ರತಿವಾರ ತಪ್ಪದೇ ಓದುವ ಫೇವರಿಟ್ ಕಾಲಂ ಇದಾಗಿದೆ.

ವಿಚಾರ ಲಹರಿಯಲ್ಲಿ ವೈನತೇಯ ಬರೆದ 'ಅನ್ನದಾತನ ಅಳಲು' ಲೇಖನ ಸಕಾಲಿಕವಾಗಿತ್ತು.

-ಮಹಾಂತೇಶ ರಾಜಗೋಳಿ, ಯರವಾಲ/ ರಾಜಶೇಖರ ಗೌಡ, ಕೊಟ್ಟೂರು/ ಕೊಹಿಮ, ಬಸರಕೋಡು/ ಕಿರಣ ಕಾಸರ, ಶಿವಮೊಗ್ಗ

### ಸಂತಸ ತಂದ ಪದ್ಯ

ಎಳೆಯರ ಅಂಗಳದಲ್ಲಿ ಲಲಿತಾ ಕೆ. ಹೊಸ ಪ್ಯಾಟಿಯವರ 'ಹೂ ಮಾರುವ ಹುಡಗಿ' ಪದ್ಯ ಓದಿ ಸಂತೋಷವಾಯಿತು. ಅರ್ಥಪೂರ್ಣ ಮತ್ತು ನೀತಿಬೋಧಕವಾಗಿತ್ತು.

-ಎಂ.ಎಂ. ಶಿರೂರ, ಇಲಕಲ್ಲ/ ಸಿದ್ದಲಿಂಗಪ್ಪ ಬೀಳಗಿ, ಹುನಗುಂದ

### ಪೀರಿಯಡ್ಸ್ ಬಗ್ಗೆ 'ವೈ-ಚಾರಿ'ಕ ನೋಟ

ಹೆಣ್ಣಾಗಿ ಹುಟ್ಟಿದವಳು ಆ ಮೂರು ದಿನಗಳ ಕಾಲ ಅನುಭವಿಸುವ ನೋವಿನೊಂದಿಗೆ ಸಂಪ್ರದಾಯ/ ಆಚರಣೆ ಹೆಸರಿನಲ್ಲಿ ಆಕೆಗಾಗುವ ಹಿಂಸೆಯನ್ನು ವಿದ್ಯಾವಂತ ಜನರೆಲ್ಲರೂ ಅರ್ಥೈಸಿಕೊಳ್ಳಬೇಕು. ಇದೊಂದು ಪ್ರಗತಿಪರವಾದ 'ವೈ-ಚಾರಿ'ಕ ಲೇಖನ.

-ದಿವಾಣ ಗೋಪಾಲಕೃಷ್ಣ ಭಟ್ಟ, ಅಂಬಲಪಾಡಿ

### 3 ದಿನ ಹೊರಗಿರುವುದೇ ಸರಿ

ಪೀರಿಯಡ್ಸ್ ಇರುವ ಮಹಿಳೆಗೆ ದೇಹ ಪ್ರಕೃತಿಯ ಏರುಪೇರಿನೊಂದಿಗೆ, ಮನಸ್ಸೂ ಮಾಮೂಲಿನಂತೆ ಇರುವುದಿಲ್ಲ. ಆದ್ದರಿಂದ ಆಕೆ ಮೂರು ದಿನ ಪೂಜಾ ಗೃಹದಿಂದ ದೂರವಿರುವುದೇ ವಾಸಿ.

-ತರಂಗಿಣಿ, ತುಮಕೂರು

### ಕಾಮನಬಿಲ್ಲು ವ್ಯತ್ಯಾಸ

ಕಾಮನಬಿಲ್ಲು ಅಂಕಣದಲ್ಲಿ ವ್ಯತ್ಯಾಸ ಗುರುತಿಸುವ ಉತ್ತರ ಜ.13, 20 ಮತ್ತು ಫೆ.17ರ ಸಂಚಿಕೆಯಲ್ಲಿ ಪ್ರತಿಯೊಂದರಲ್ಲೂ ಲೇಖಕರು ಸೂಚಿಸಿದ್ದಕ್ಕಿಂತ ಒಂದು ಹೆಚ್ಚು ವ್ಯತ್ಯಾಸವಿದೆ.

-ರಘುನಾಥರಾವ್ ತಾಪ್ಸೆ, ದಾವಣಗೆರೆ

### ಸಿರಿಧಾನ್ಯ ಪಾಕ ವಿಧಾನಕ್ಕೆ ಬಹುಮಾನ

ಧಾರವಾಡದ ಕೃಷಿ ಮಾಧ್ಯಮ ಕೇಂದ್ರವು ಸಾವಿ, ರಾಗಿ, ನವಣೆ, ಸಜ್ಜೆ, ಅರ್ಕಾ, ಉದಲು, ಕೊರ್ಲು, ಬರಗ ಮುಂತಾದ ಸಿರಿಧಾನ್ಯ ಬಳಕೆಯ ಪಾಕ ವಿಧಾನಗಳಿಗೆ ಬಹುಮಾನ ನೀಡಲು ಉದ್ದೇಶಿಸಿದೆ. ಇದುವರೆಗೆ ಒರಟು ಧಾನ್ಯಗಳೆಂದು ಕಡೆಗಣಿಸಲ್ಪಟ್ಟಿರುವ, ಆದರೆ ಅಪಾರ ಪೌಷ್ಟಿಕಾಂಶಗಳ ಆಗರವಾಗಿರುವ ಈ ಆಹಾರ ಧಾನ್ಯಗಳನ್ನು ಜನಪ್ರಿಯಗೊಳಿಸಲು ಉದ್ದೇಶಿಸಲಾಗಿದೆ.

ಆಸಕ್ತರು ಸಿರಿಧಾನ್ಯಗಳಿಂದ ತಯಾರಿಸುವ ಅಥವಾ ಅವುಗಳ ಬಳಕೆಯನ್ನೊಳಗೊಂಡ ಯಾವುದೇ ಬಗೆಯ ಅಡುಗೆಯ ಬಗ್ಗೆ ವಿವರವನ್ನು ಮಾರ್ಚ್ 20ರ ಒಳಗಾಗಿ ಕಳಿಸುವಂತೆ ಕೋರಲಾಗಿದೆ. ಜತೆಗೆ ಪ್ರವೇಶ ಕಳುಹಿಸುವವರ ಪುಟ್ಟ ಪರಿಚಯ ಬರೆದಿರಬೇಕು. ಆಯ್ದ 10 ಪಾಕ ವಿಧಾನಗಳಿಗೆ ಬಹುಮಾನ ನೀಡ ಲಾಗುವುದು. ಎಲ್ಲ ಉತ್ತಮ ಪಾಕವಿಧಾನಗಳ ವಿವರವನ್ನು ಸಿರಿಧಾನ್ಯ ಪುಸ್ತಕದಲ್ಲಿ ಪ್ರಕಟಿಸಲಾಗುವುದು. ವಿಳಾಸ: ಕೃಷಿ ಮಾಧ್ಯಮ ಕೇಂದ್ರ, 119, 1ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ನಾರಾಯಣಪುರ, ಧಾರವಾಡ-580008.

## ಸುಧಾ

**ರಸಪ್ರಶ್ನೆ ಐದನೆ ಡ್ರಾ (ಫೆ.3) ದ ಬಹುಮಾನ ವಿಜೇತರು**

1. ಆಲ್‌ಫ್ರೆಡ್ ಡಿಸೋಜ- ಚಿಕ್ಕಮಗಳೂರು
2. ಎಸ್.ಜಿ.ರಾಜಶೇಖರ ರೆಡ್ಡಿ- ಗೌರಿಬಿದನೂರು
3. ಕೆ.ಎಸ್.ಶಾಂತಕುಮಾರ್- ದಾವಣಗೆರೆ
4. ಮಂಜುನಾಥ ಜಟಿ ನಾಯಕ್- ಹೊನ್ನಾವರ
5. ಜೆ.ನಿರ್ಮಲಾ- ಕೂಡ್ಲಿಗಿ
6. ಎ.ಟಿ.ಪ್ರದೀಪಕುಮಾರ್- ಬೆಂಗಳೂರು
7. ಆರ್.ಪುಟ್ಟಸ್ವಾಮಿ- ಮಂಡ್ಯ
8. ಎಸ್.ಸಿದ್ದರಾಮನಾಯಕ- ಪುತ್ತೂರು
9. ಬಿ.ಆರ್.ವೆಂಕಟೇಶ್- ಬೆಂಗಳೂರು
10. ಎಸ್.ಕೆ.ಸತ್ಯನಾರಾಯಣ- ಕೆ.ಆರ್.ನಗರ

fly mobile


# ಅಪಾಯಕ್ಕೆ ಆಹ್ವಾನ ನೀಡುತ್ತಿದೆಯೇ ಆ ಪುಟ್ಟ ಹೃದಯ

ಸ್ನೇಹ, ಪ್ರೀತಿ ಮತ್ತು ಪ್ರೇಮಗಳಂತಹ ಅಪ್ಯಾಯಮಾನವಾದ ಸಂಬಂಧಗಳಿಗೆ ಮುನಿಸೇ ಮುನ್ನುಡಿ ಎಂಬ ಹಳೆಯ ಮಾತೊಂದಿದೆ ಈ ಮಾತು ಸೂಜಿ ಹಾಗೂ ರಶ್ಮಿ ನಡುವಿನ ಸ್ನೇಹದಲ್ಲಿಯೂ ಅಕ್ಷರಶ:ದಷ್ಟೇ ಸತ್ಯವಾಗುತ್ತದೆ. ರಶ್ಮಿಯ ಸ್ನೇಹ ಹಸ್ತವನ್ನು ನೇರವಾಗಿಯೇ ಆಗ್ಗಿಂದಾಗ್ಗೆ ತಿರಸ್ಕರಿಸುತ್ತಿದ್ದ ಸೂಜಿ ಅಂತೂ ಇಂತೂ ಕೊನೆಗೊಂದು ದಿವಸ ಅವಳ ಸ್ನೇಹಕ್ಕೆ ಮರುಳಾಗುತ್ತಾಳೆ ಈ ಪುಟ್ಟ ಹೃದಯಗಳ ನಡುವೆ ಎಳೆಯದಾಗಿ ಆರಂಭವಾದ ಸ್ನೇಹ ಕಾಲ ಸರಿದಂತೆಲ್ಲ ಗಾಢವಾಗ ತೊಡಗುತ್ತದೆ.

ಸ್ಲಂ ಹುಡಗರ ಜೀವನ, ಅವರ ಗೆಳೆತನ, ಸಂಬಂಧಗಳು, ಅವರದ್ದೇ ಆದ ವಿಶಿಷ್ಟವಾದ ಜೀವನ ಶೈಲಿ ಹಾಗೂ ಅವರ ನಿತ್ಯ ಜೀವನದ ಏಳುಬೀಳಿನ ಪಯಣಗಳನ್ನು ಕಣ್ಣಾರೆ ಕಂಡು ಅನುಭವಿಸುವ ರಶ್ಮಿಯ ಮನಸ್ಸು ಹಂತ ಹಂತವಾಗಿ ಸ್ಲಂ ನತ್ತಲೇ ವಾಲತೊಡಗುತ್ತದೆ. "ಶ್ರೀಮಂತಿಕೆಯ ಜೀವನ ಚಿನ್ನದ ಪಂಜರದೊಳಗಿನ ಗಿಳಿಯ ಜೀವನದಂತೆ" ಎಂದು ತನ್ನಷ್ಟಕ್ಕೆ ತಾನೇ ಒಂದು ನಿರ್ಧಾರಕ್ಕೆ ರಶ್ಮಿ ಬರತೊಡಗುತ್ತಾಳೆ.

ವೈಭವದ ಶ್ರೀಮಂತಿಕೆಯ ಜೀವನಕ್ಕಿಂತಲೂ ಅವಳಿಗೆ ಸ್ಲಂ ನಲ್ಲಿನ ಸರಳ ಜೀವನವೇ ತನ್ನ ಬದುಕಿಗೆ ಹತ್ತಿರವಾಗ ತೊಡಗುತ್ತದೆ. ಈ ನಡುವೆ ಇವಳು ಕೊಳಗೇರಿಯ ಹುಡುಗರೊಂದಿಗಿನ ಸ್ನೇಹ, ತನ್ನ ಮನೆಯವರ ಕೆಂಗಣ್ಣಿಗೆ ಗುರಿಯಾಗುತ್ತದೆ. ಕೊಳಗೇರಿಗಳಲ್ಲಿನ ಮಕ್ಕಳ ಬದುಕು, ಮನಸತ್ವ ಹಾಗೂ ನಡಾವಳಿಕೆಗಳು ಸ್ಲಂನಷ್ಟೇ ಕೊಳಕಾಗಿರುತ್ತವೆ ಎಂಬ ಮಧ್ಯಮವರ್ಗದ ಪೋಷಕರ ಮನೋಧರ್ಮ ರಶ್ಮಿ ಪೋಷಕರಲ್ಲಿಯೂ ಇರುವುದರಿಂದ ರಶ್ಮಿಯ ಸ್ಲಂ ಪಯಣಕ್ಕೆ ಅಂಕುಶ ಹಾಕತೊಡಗುತ್ತಾರೆ. ಆದರೆ ಸ್ಲಂ ಗೆಳೆಯರ ಸ್ನೇಹದ ಸಿಂಚನ ಅವಳ ಹೃದಯದಲ್ಲಿ ಆಗ್ಗಿಂದಾಗ ತಳಮಳ ಉಂಟು ಮಾಡುತ್ತದೆ.

ಒಂದೆಡೆ ಸ್ಲಂ ಮಕ್ಕಳ ಅಪರೂಪದ ಪ್ರೀತಿ, ಮತ್ತೊಂದೆಡೆ ಪೋಷಕರ ವಿರೋಧದ ಭೀತಿಯ ನಡುವೆ ದ್ವಂದ್ವಕ್ಕೊಗಾಗುವ ರಶ್ಮಿಯ ಜೀವನದಲ್ಲಿ ಸ್ಲಂ ಅವಿಭಾಜ್ಯ ಅಂಗದಂತಾಗಿರುತ್ತದೆ. ಈ ಹೊತ್ತಿನಲ್ಲಿ ಅವಳಿಗೆ ಹೊಳೆಯುವ ಒಂದೇ ಉಪಾಯ ತಾನು ತನ್ನ ಸ್ವಂತ ಮನೆಯನ್ನು ತೊರೆಯುವುದು ಹಾಗೂ ತನ್ನ ಪೋಷಕರನ್ನು ಅಗಲುವುದು.

ಆದರೆ ಹುಟ್ಟಿದ ಮನೆ ತೊರೆದು ಓಡೋಡಿ ಹೋಗುವುದು ಅಷ್ಟೊಂದು ಸುಲಭದ ಮಾತಾ? ಅದಕ್ಕೊಂದು ಉಪಾಯ, ಸಮಯ ಬೇಕು ಹಾಗೂ ಅದಕ್ಕೆ ಅನುಗುಣವಾದ ಸಂದರ್ಭವನ್ನು ಒತ್ತಾಯ ಪೂರ್ವಕವಾಗಿ ಸೃಷಬೇಕು ಆದರೆ ಇಂತಹ ಅಪಾಯಕಾರಿ ಸವಾಲನ್ನು ಎದುರಿಸಲು ರಶ್ಮಿಯಂತಹ ಪುಟಾಣಿ ಜೀವ ಸಿದ್ದಗೊಳ್ಳುವುದು ಆಶ್ಚರ್ಯಕ್ಕೆ ಕಾರಣವಾದರೆ. ರಶ್ಮಿಯ ಈ ಪ್ರಯತ್ನಕ್ಕೆ ಸೂಜಿ ಸಾಥ್ ನೀಡುವುದು ದುರಂತಕ್ಕೆ ಕಾರಣವಾಗಲಿದೆಯೇ ಎಂಬ ಕುತೂಹಲ ಎಲ್ಲರನ್ನು ಕಾಡುತ್ತದೆ.

**ಸೋಮ-ಶುಕ್ರ ರಾತ್ರಿ 7:30ಕ್ಕೆ ಜೀ ಕನ್ನಡ ವಾಹಿನಿಯಲ್ಲಿ 'ಅರಸಿ'.**